

# ಜೀವನ ಭದ್ರತೆಗೆ ಓದು ಅಗತ್ಯ

## ಪ್ರಕೃತಿ ಪ್ರಸಾದ್

**ಕಲರ್ಸ್ ಕನ್ನಡದ 'ನಮ್ಮನೆ ಯುವರಾಣಿ'ಯ ನಮ್ರತಾ**

◆ **ನಟನೆಯನ್ನು ನೀವು ರೂಢಿಸಿಕೊಂಡಿದ್ದು ಹೇಗೆ?**

ಬೇಸಿಗೆ ಶಿಬಿರಗಳು. ಶಾಲಾ ದಿನಗಳಲ್ಲಿ ಪ್ರತಿ ವರ್ಷ ಯಾವುದಾದರೂ ಒಂದು ಶಿಬಿರದಲ್ಲಿ ಭಾಗವಹಿಸುತ್ತಿದ್ದೆ. ಡಾನ್ಸ್– ಗಾಯನದ ನಂತರ ನಟನಾ ಶಿಬಿರಕ್ಕೆ ಒಮ್ಮೆ ಸೇರಿದೆ. ಶಿಬಿರದ ಆ ಕೇಂದ್ರ ನಮ್ಮ ಮನೆ ಹತ್ತಿರವೇ ಇತ್ತು. ಅಲ್ಲಿ ಮೂರು ತಿಂಗಳು ನಟನೆಯನ್ನು ಹೇಳಿಕೊಟ್ಟರು. ನಂತರ ಆಡಿಷನ್ ನಡೆಯುತ್ತಿರುವ ವಿವರವನ್ನು ಅವರು ಕಳುಹಿಸುತ್ತಿದ್ದರು. ಆಗ ಧಾರಾವಾಹಿಯೊಂದರಲ್ಲಿ ಚಿಕ್ಕ ಪಾತ್ರಕ್ಕೆ ಅವಕಾಶ ಪಡೆದೆ. ಇದು ನನ್ನ ಐದನೇ ಧಾರಾವಾಹಿ.

◆ **ಭಿನ್ನ ಅಭಿರುಚಿಗಳ ನಡುವೆ ವೃತ್ತಿಯಾಗಿ ಏನು ಮಾಡಬೇಕು ಎನ್ನುವ ಕನಸಿತ್ತು?**

ನಟನೆ ಮಾಡುತ್ತೇನೆ ಎನ್ನುವ ನಂಬಿಕೆ ಇತ್ತು. ಆದರೆ ಅವಕಾಶ ಸಿಗುವ ಬಗ್ಗೆ ಅನುಮಾನ ಇದ್ದೇ ಇತ್ತು. ಹಾಗಾಗಿ ಈ ಬಗ್ಗೆ ಯಾವತ್ತೂ ಗಂಭೀರವಾಗಿ ಯೋಚನೆಯನ್ನೇ ಮಾಡಲಿಲ್ಲ. ಆದರೆ ನನಗೆ ಅವಕಾಶ ಸಿಕ್ಕಿದ್ದರಿಂದ ನಟಿಸಲು ಸಾಧ್ಯವಾಯಿತು. ಹಾಗೆಂದು ನಾನು ಓದನ್ನು ಬಿಟ್ಟಿರಲಿಲ್ಲ. ಈಗ ಮನಃಶಾಸ್ತ್ರದಲ್ಲಿ (ಕೌನ್ಸಲಿಂಗ್ ಅಂಡ್ ಫ್ಯಾಮಿಲಿ ಥೆರೆಪಿ) ಎಂಎಸ್ಸಿ ಅಂತಿಮ ಸೆಮಿಸ್ಟರ್ ಮಾಡುತ್ತಿದ್ದೇನೆ.

ಅಭಿನಯವನ್ನೇ ಮಾಡುತ್ತೇನೆ ಎಂಬ ನಿರ್ದಿಷ್ಟತೆ ಇರಲಿಲ್ಲ. ನನಗೆ ಏನೆಲ್ಲ ಮಾಡಲು ಸಾಧ್ಯ ಎನ್ನುವ ಆವಿಷ್ಕಾರದಲ್ಲಿದ್ದೆ. ವೃತ್ತಿಯಾಗಿ ಏನಾದರೊಂದು ಮಾಡಲೇ ಬೇಕಿತ್ತು. ಮನಃಶಾಸ್ತ್ರದಲ್ಲಿ ಆಸಕ್ತಿ ಮೂಡಿದ್ದರಿಂದ ಅದನ್ನೇ ಓದಿದೆ. ನಟನೆಗೂ ಮುಂಚೆ ನಾನು ಗಾಯಕಿ ಆಗುತ್ತೇನೆ ಎಂದು ಕನಸು ಕಟ್ಟಿಕೊಂಡಿದ್ದೆ. ಆಗ ನಾನು ಚೆನ್ನಾಗಿ ಹಾಡುತ್ತಿದ್ದೆ. ಸ್ವಲ್ಪ ದಿನ ಗಗನಸಖಿಯಾಗುವ ಕನಸೂ ಗರಿಗೆದರಿತ್ತು. ಆದರೆ ಅದು ಗರಿಬಿಚ್ಚಿ ಹಾರಾಡಲಿಲ್ಲ. ಇವೆಲ್ಲ ಹಿನ್ನೆಲೆಗೆ ಸರಿದು ಮುನ್ನೆಲೆಗೆ ಬಣ್ಣದ ಲೋಕ ಬಂದಿದೆ. ನಟನೆಯ ಹಿನ್ನೆಲೆ ಇಲ್ಲದೆ ಇಲ್ಲಿ ನೆಲೆಗೊಂಡಿದ್ದೇನೆ. ಕಲಾವಿದರು ಆಗಬೇಕು ಎನ್ನುವ ಆಸೆ ಇದ್ದರೆ ಹಟವನ್ನು ಬಿಡದೆ ಪ್ರಯತ್ನಿಸಬೇಕು. ಅನಿಶ್ಚಿತತೆ ಇಲ್ಲಿ ಹಾಸುಹೊಕ್ಕಾಗಿರುವುದರಿಂದ ಶಿಕ್ಷಣವನ್ನೂ ಅರ್ಧಕ್ಕೆ ಬಿಡುವಂತಿಲ್ಲ. ಒಂದಲ್ಲ ಒಂದು ನಮ್ಮ ಕೈ ಹಿಡಿಯಬೇಕು ಎಂದರೆ ಚೆನ್ನಾಗಿ ಓದಬೇಕು ಎಂದು ನನಗೆ ಅನಿಸಿದೆ.

◆ **ವಿಚಿತ್ರ ಗುಣಧರ್ಮದ ಪಾತ್ರ ಸಿಕ್ಕರೆ...**

ಅಂತಹ ಪಾತ್ರವನ್ನು ನಿರ್ವಹಿಸಲು ಕಾಯುತ್ತಿದ್ದೇನೆ. ಯಾವುದೇ ಪಾತ್ರ ಆದರೂ ಅದರ ಸ್ವಭಾವ ಗೊತ್ತಿರದೆ ಇರುವವರಿಗಿಂತ ಗೊತ್ತಿರುವವರು ಪಾತ್ರದ ಆಳ ಅಗಲವನ್ನು ಅರಿತು ಹೆಚ್ಚು ಆಳಕ್ಕೆ ಇಳಿಯಲು ಸಾಧ್ಯ. ಅವರು ಭಾವುಕತೆಗಿಂತ ವಾಸ್ತವಿಕತೆಗೆ ಹತ್ತಿರವಾಗುವಂತೆ ನಟಿಸಬಲ್ಲರು. ಪಾತ್ರದ ನಾಡಿ ಮಿಡಿತವನ್ನು ಅವರು ಹಿಡಿಯುತ್ತಾರೆ ಎಂದುಕೊಂಡಿದ್ದೇನೆ.

◆ **ಆರಂಭದ ದಿನಗಳು ಹೇಗಿದ್ದವು, ಮುಂದಿನ ದಿನಗಳು ಹೇಗಿರಬಹುದು?**

ಮೊದಲು ಕಾಲೇಜು ಮತ್ತು ನಟನೆ ಎರಡನ್ನೂ ಒಟ್ಟಿಗೆ ನಿರ್ವಹಿಸುತ್ತಿದ್ದೆ. ಬೆಳಿಗ್ಗೆ ಅರ್ಧ ದಿನ ಕಾಲೇಜಿಗೆ ಹೋದರೆ ನಂತರದ ಅರ್ಧ ದಿನ ನಟನೆಗೆ ಮೀಸಲಿಡುತ್ತಿದ್ದೆ. ರಾತ್ರಿ ಮನೆಗೆ ಹೋದ ನಂತರ ಬೆಳಿಗ್ಗೆಯ ತರಗತಿಯ ಬಗ್ಗೆ ಯೋಚನೆ ಮಾಡುತ್ತಿದ್ದೆ. ಇದರಿಂದಾಗಿ ಪೂರ್ಣ ಪ್ರಮಾಣದಲ್ಲಿ ಓದಿಗೂ ಗಮನ ಕೇಂದ್ರೀಕರಿಸಲು ಆಗುತ್ತಿರಲಿಲ್ಲ. ನಟನೆಯನ್ನೂ ಪೂರ್ಣ ಕಲಿಯಲು ಆಗುತ್ತಿರಲಿಲ್ಲ. ಚಿತ್ರೀಕರಣದಲ್ಲೂ ದಿನವಿಡೀ ಇರಲು ಆಗುತ್ತಿರಲಿಲ್ಲ. ನನ್ನ ಪದವಿ ನಂತರ ನಟನೆಯನ್ನು ಪೂರ್ಣಾವಧಿಯಾಗಿ ತೆಗೆದುಕೊಂಡ ಮೊದಲ ಧಾರಾವಾಹಿ ಎಂದರೆ 'ನಮ್ಮನೆ ಯುವರಾಣಿ'. ಇದರಿಂದ ಸೆಟ್‌ನಲ್ಲಿ ಪೂರ್ಣ ದಿನ ಇರುವ ಜೊತೆಗೆ ಕಲಿಯಲು ಸಾಧ್ಯ ಆಯಿತು. ಕಾಲ್‌ಶೀಟ್ ಎಂದರೇನು ಎನ್ನುವ ಪ್ರಾಥಮಿಕ ಸಂಗತಿಯಿಂದ ಹಿಡಿದು ಒಬ್ಬ ಕಲಾವಿದೆಗೆ ಗೊತ್ತಿರಬೇಕಾದ ತಾಂತ್ರಿಕ ಅಂಶವನ್ನು ಕಲಿತಿದ್ದೇನೆ.

ಮೊದಲಿನ ದಿನಗಳಿಗೆ ಹೋಲಿಸಿದರೆ ಅಚ್ಚರಿಯಾಗುವಷ್ಟು ಬದಲಾಗಿದ್ದೇನೆ. ಮುಂದಿನ ದಿನಗಳ ಬಗ್ಗೆ ಹೇಳುವುದಾದರೆ ಈ ವೃತ್ತಿಯನ್ನೇ ಮುಂದುವರಿಸುತ್ತೇನೆ. ಹಲವು ಸಿನಿಮಾಗಳಿಗೆ ಅವಕಾಶಗಳು ಬಂದಿವೆ. ಇದರ ಜೊತೆ 'ಮನಸಾರೆ'ಯಲ್ಲೂ ನಟಿಸುತ್ತಿರುವುದರಿಂದ ನನಗೂ ಸಮಯ ಸಿಗುತ್ತಿಲ್ಲ. ಸಮಾಜದಲ್ಲಿ ಆರೋಗ್ಯದ ಪರಿಸ್ಥಿತಿಯೂ ಸರಿ ಇಲ್ಲದ ಕಾರಣಕ್ಕೆ ಮೊದಲ ಹಂತದ ಮಾತುಕತೆಯ ನಂತರ ಮತ್ತೊಂದು ಹೆಜ್ಜೆ ಮುಂದಕ್ಕೆ ಹೋಗಲು ಆಗಿಲ್ಲ. ನಟನೆಯನ್ನು ಮಾಡಬಲ್ಲೆ ಎನ್ನುವ ವಿಶ್ವಾಸ ಬಂದಿದೆ. ಮೊದಲು ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಇತ್ತು. ಆದರೆ ಈಗ ಇಲ್ಲೇ ಮುಂದೆವರಿಯಬಲ್ಲೆ.

◆ **ಚಿಕ್ಕ ಹುಡುಗಿಯಂತೆ ಕಾಣುತ್ತೀರಿ ಎಂದು ನಿಮಗೆ ಹೇಳುತ್ತಾರಾ?**

'ನಮ್ಮನೆ ಯುವರಾಣಿ'ಗೆ ಆಡಿಷನ್ ನೀಡದೇ ನೇರವಾಗಿ ಆಯ್ಕೆಯಾದೆ. ಹಾಗಾಗಿ ಚಿತ್ರೀಕರಣದ ಸಂದರ್ಭದಲ್ಲಿ ಆ ರೀತಿ ಹೇಳಿದ್ದಾರೆ. ನನ್ನ ಪಾತ್ರದ ಹೆಸರು ನಮ್ರತಾ ಆದರೆ, ಎಲ್ಲರೂ ಅಮ್ಮು ಎಂದು ಕರೆಯುತ್ತಾರೆ. ಈ ಪಾತ್ರ ಸಿಕ್ಕಿದ್ದು ಅಚ್ಚರಿ. ಏಕೆಂದರೆ, ಒಂದು ಸಂಜೆ ಫೋನ್ ಕರೆಯಲ್ಲಿ ಫೋಟೊ ಕಳಿಸಿ ಎಂದರು. ಫೋಟೊ ಕಳಿಸಿ ಎರಡು ಗಂಟೆಗೆ ಪಾತ್ರಕ್ಕೆ ಆಯ್ಕೆಯಾಗಿದ್ದು ನಾಳೆ ಚಿತ್ರೀಕರಣಕ್ಕೆ ಬನ್ನಿ ಎಂದು ಸಮಯವನ್ನೂ ಹೇಳಿದರು.

■ **ರಾಘವೇಂದ್ರ ಕೆ.**